**ದಿನಾಂಕಃ 12/12/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಆರೋಪಿತರ ಪರ ಶ್ರೀ ಎನ್.ಕೆ ವಕೀಲರಿಂದಃ**

7. ನಾನು ಬೆಂಗಳೂರಿನ ವಾಸಿ. ಹಿಟಾಚಿ ವಾಹನ ನನ್ನ ಹೆಸರಿನಲ್ಲಿದೆ ಎಂದು ತೋರಿಸುವ ದಾಖಲಾತಿ ಪೊಲೀಸರಿಗೆ ನೀಡಿದ್ದೇನೆ. ಅದರ ಚಾಸೀಸ್ ಸಂಖ್ಯೆ ಮರೆತಿದ್ದೇನೆ, ಕಾರಣ ಬಹಳ ದಿನ ಆಗಿದೆ. ನಾನು ಆರೋಪಿತನ ಜಮೀನಿನಲ್ಲಿ ಗಣಿಗಾರಿಕೆ ಮಾಡುತ್ತಿದ್ದ ಬಗ್ಗೆ ಕರಾರು ಪತ್ರ ಇಲ್ಲ. ನಾನು ಎಷ್ಟನೇ ತಾರೀಖು, ತಿಂಗಳು ಮತ್ತು ಇಸವಿಯಲ್ಲಿ ಗಣಿಗಾರಿಕೆ ಮಾಡುತ್ತಿದ್ದೆ ಎಂದು ನೆನಪಿಲ್ಲ. ನಾನು ಎಷ್ಟನೇ ತಾರೀಖು, ತಿಂಗಳು ಮತ್ತು ಇಸವಿಯಲ್ಲಿ ಗಣಿಗಾರಿಕೆ ನಿಲ್ಲಿಸಿದೆ ಎಂದು ನೆನಪಿಲ್ಲ. ಕಲ್ಲು ಗಣಿಗಾರಿಕೆ ಮಾಡುವಾಗ ಅದರ ಸಾಗಣೆ ಮಾಡುತ್ತಿದ್ದು ಅದರ ರಾಯಲ್ಟಿ ಕಟ್ಟಿದ್ದೇನೆ. ಅದನ್ನು ಪೊಲೀಸರಿಗೆ ನೀಡಿಲ್ಲ. ಗಣಿಗಾರಿಕೆ ಮಾಡುತ್ತಿದ್ದ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಂದ ಪಡೆದ ದಾಖಲಾತಿ ನನ್ನ ಬಳಿ ಇಲ್ಲ. ಆರೋಪಿತನ ಬಳಿ ಇದೆ. ಕಲ್ಲು ಗಣಿಗಾರಿಕೆ ಮಾಡಲು ವ್ಯವಸ್ಥಾಪಕರನ್ನು ನೇಮಿಸಿದ್ದೆ. ಈ ಪ್ರಕರಣದಲ್ಲಿ ನಮೂದಿಸಿರುವ ಹಿಟಾಚಿ ವಾಹನವು ಸುಮಾರು 4-5 ವರ್ಷ ಗಣಿಗಾರಿಕೆಯ ಪ್ರದೇಶದಲ್ಲಿ ಕೆಲಸ ಮಾಡಿದೆ. ಸದರಿ ವಾಹನವನ್ನು ಬಿಹಾರಿ ಹುಡುಗ ಚಲಾಯಿಸುತ್ತಿದ್ದ. ಆತನ ಹೆಸರು ಮರೆತಿದ್ದೇನೆ. ಸದರಿ ವಾಹನಕ್ಕೆ ಡೀಸೇಲ್ ಹಾಕಿಸಿದ ದಾಖಲಾತಿ ಇಲ್ಲ. ವಾಹನ ಚಾಲಕನಿಗೆ ನೀಡುತ್ತಿದ್ದ ಸಂಬಳದ ರಸೀದಿ ಇಲ್ಲ.

8. ಅಣ್ಣಯ್ಯ ರೆಡ್ಡಿ ನನಗೆ ಏನೂ ಸಂಬಂಧ ಇಲ್ಲ. ಅಣ್ಣಯ್ಯ ರೆಡ್ಡಿಯವರನ್ನು ಬಿಟ್ಟು ಕಾಂತರಾಜು ಎಂಬುವವರು ಅವರ ಮನೆಯ ಹತ್ತಿರ ಹಿಟಾಚಿ ವಾಹನ ನಿಲ್ಲಿಸುತ್ತಿದ್ದುದ್ದನ್ನು ನೋಡಿದ್ದಾರೆ. ಯಾವ ತಾರೀಖು, ತಿಂಗಳಿನಂದು ಅಣ್ಣಯ್ಯ ರೆಡ್ಡಿಯವರ ಮನೆಯ ಹತ್ತಿರ ವಾಹನವನ್ನು ನಿಲ್ಲಿಸಿದ್ದೆ ಎಂದು ನೆನಪಿಲ್ಲ. ಅದರೆ 2017-18 ರಂದು ನಿಲ್ಲಿಸಿದ್ದೆ. ನಾನು ಗಣಿಗಾರಿಕೆ ಮಾಡಿದ ಬಗ್ಗೆ ನನ್ನ ಐಟಿ ರಿಟರ್ನ್ಸ್ ನಲ್ಲಿ ತೋರಿಸಿದ್ದೇನೆ. ಅದರೆ ಪೊಲೀಸರಿಗೆ ಅದನ್ನು ನೀಡಿಲ್ಲ. ಅವಶ್ಯಕತೆಯೂ ಇಲ್ಲ. ಅಣ್ಣಯ್ಯ ರೆಡ್ಡಿಯವರಿಗೂ ನನಗೂ ಫೋನ್ ಸಂಪರ್ಕ ಇರಲಿಲ್ಲ. ಅದರೆ ಕಾಂತರಾಜು ರವರ ಮುಖಾಂತರ ಫೋನಿನಲ್ಲಿ ಅವರನ್ನು

ಸಂಪರ್ಕಿಸುತ್ತಿದ್ದೆ. ಕಾಂತರಾಜು ರವರು ನನಗೆ ಪೋನ್ ಮುಖಾಂತರ 2019 ರಲ್ಲಿ ವಾಹನ ಇಲ್ಲವೆಂದು ತಿಳಿಸಿದರು. ನಾನು 4 ದಿನಗಳ ನಂತರ ಸ್ಥಳಕ್ಕೆ ಬಂದಿದ್ದೆ. ನನ್ನ ದೂರಿನಲ್ಲಿ ನಾನು ಬೆಂಗಳೂರಿನಲ್ಲಿದ್ದಾಗ ಅಣ್ಣಯ್ಯ ಮತ್ತು ಕಾಂತರಾಜು ರವರು ಪೋನಿನಲ್ಲಿ ವಾಹನ ಇಲ್ಲವೆಂದು ತಿಳಿಸಿದರು ಎಂದು ಹೇಳಲು ತೊಂದರೆ ಇರಲಿಲ್ಲ. ನನ್ನ ದೂರಿನಲ್ಲಿ ನನಗೆ ನಷ್ಟವಾಗಿತ್ತು ಎಂದು ತಿಳಿಸಿಲ್ಲ. ನಾನು ಅಣ್ಣಯ್ಯ ರೆಡ್ಡಿಯವರ ಮನೆಯಲ್ಲಿ ಹಿಟಾಚಿ ನಿಲ್ಲಿಸಿದ ದಿನದಿಂದ 2 ವರ್ಷಗಳ ನಂತರ ಕಾಂತರಾಜು ಮತ್ತು ಅಣ್ಣಯ್ಯ ರವರು ಪೋನ್ ಮುಖಾಂತರ ಹಿಟಾಚಿ ವಾಹನ ಕಳುವಾಗಿದೆ ಎಂದು ತಿಳಿಸಿದ್ದರು.

9. ಕಲ್ಲು ಗಣಿಗಾರಿಕೆ ಸಮಯದಲ್ಲಿ ನನ್ನ ಹತ್ತಿರ 10 ಜನ ಕೆಲಸ ಮಾಡುತ್ತಿದ್ದರು. ನಾನೇ ಅವರಿಗೆ ಸಂಬಳವನ್ನು ನೀಡುತ್ತಿದ್ದೆ. ಅದರ ರಸೀದಿಗಳು ಇಲ್ಲ. ಆ ಸಮಯದಲ್ಲಿ ನನ್ನ ಕೆಲಸಗಾರರು ನನ್ನೊಂದಿಗೆ ಯಾವಾಗಲೂ ಸಂಪರ್ಕದಲ್ಲಿದ್ದರು. ಮೇಲೆ ಹೇಳಿದ 2 ವರ್ಷಗಳ ಅಂತರದಲ್ಲಿ ನಾನು ಗಣಿಗಾರಿಕೆ ಸ್ಥಳಕ್ಕೆ ಮತ್ತು ಬೆಟ್ಟದಪುರಕ್ಕೆ ಬೇಟಿ ನೀಡಿದ್ದೆ. ನನ್ನ ದೂರಿನಲ್ಲಿ ನಾನು ಹೃದಯ ಸಂಬಂಧಿ ಕಾಯಿಲೆ ಅನುಭವಿಸುತ್ತಿದ್ದೇನೆ ಎಂದು ತಿಳಿಸಿದ್ದೆ. ಅದರ ಸಂಬಂಧ ದಾಖಲಾತಿ ಇಲ್ಲ. ನಾನು ಟ್ರಿನಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ. ಸಿ.ಎಲ್.ಮಂಜುನಾಥ ರವರು ವೈದ್ಯರಾಗಿದ್ದರು. ಸದರಿ ಚಿಕಿತ್ಸೆಯ ಬಗ್ಗೆಯೂ ದಾಖಲಾತಿ ಇಲ್ಲ.

10. ಕಾಂತರಾಜು ಮತ್ತು ಅಣ್ಣಯ್ಯ ರವರು ಹಿಟಾಚಿ ವಾಹನ ಇಲ್ಲವೆಂದು ತಿಳಿಸಿದ 4 ದಿನಗಳ ನಂತರ ಬಂದು, ಅದೇ ದಿನ ದೂರನ್ನು ಸಲ್ಲಿಸಿದೆ. ನಾನು ನನ್ನ ದೂರಿನಲ್ಲಿ ನಾನು ದಿಃ23/09/2019 ರಂದು ಮಧ್ಯಾಹ್ನ 1.00 ಗಂಟೆಗೆ ನಮ್ಮ ಬಾಬ್ತು ಮೇಲ್ಕಂಡ ಹಿಟಾಚಿ ವಾಹನವನ್ನು ತೆಗೆದುಕೊಂಡು ಹೋಗಲು ಸುರಗಳ್ಳಿಯ ಅಣ್ಣಯ್ಯ ರೆಡ್ಡಿಯವರ ಮನೆಯ ಬಳಿಗೆ ಬಂದಿದ್ದೆ ಎಂದು ತಿಳಿಸಿದ್ದೇನೆ. ನನ್ನ ಹತ್ತಿರ ಒಂದು ಕೀ ಇತ್ತು. ಸಾಕ್ಷಿ ಮುಂದುವರೆದು ಮುಂದಿನ ಗ್ಲಾಸ್ ಹೊಡೆದುಹಾಕಿ ವಾಹನವನ್ನು ತೆಗೆದುಕೊಂಡು ಹೋಗಿದ್ದರು. ಕಾಂತರಾಜು ಮತ್ತು ಅಣ್ಣಯ್ಯ ರವರು ಮುಂದಿನ ಗ್ಲಾಸ್ ಹೊಡೆದು ಹಾಕಿ ವಾಹನವನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿದ್ದರು. ದೂರಿನಲ್ಲಿ ಮುಂದಿನ

ಗ್ಲಾಸ್ ಹೊಡೆದುಹಾಕಿ ವಾಹನವನ್ನು ತೆಗೆದುಕೊಂಡು ಹೋಗಿದ್ದರು ಎಂದು ತಿಳಿಸಲು ತೊಂದರೆ ಇರಲಿಲ್ಲ. ಸ್ಥಳದಲ್ಲಿ ಗ್ಲಾಸ್ ಪೀಸುಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ವಾಹನವೇ ಇರಲಿಲ್ಲ ಎಲ್ಲಿ ಗ್ಲಾಸ್ ಪೀಸುಗಳನ್ನು ನೋಡುವುದು ಎಂದು ನುಡಿಯುತ್ತಾರೆ.

11. ಹಿಟಾಚಿ ವಾಹನವನ್ನು ಒಡಿಸಿಕೊಂಡು 14 ಚಕ್ರದ ಗಾಡಿಗೆ ತುಂಬಿಕೊಂಡು ತೆಗೆದುಕೊಂಡು ಹೋಗಿದ್ದಾರೆ. ಆ ರೀತಿ ತುಂಬಿಕೊಂಡು ಹೋಗಿದ್ದನ್ನು ಕಾಂತರಾಜು ಮತ್ತು ಅಣ್ಣಯ್ಯ ರವರು ತಿಳಿಸಿದ್ದರು. ಸದರಿ ವಿಚಾರವನ್ನು ದೂರಿನಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ಅಣ್ಣಯ್ಯ ರೆಡ್ಡಿಯವರ ಮನೆ ಜಮೀನಿನಲ್ಲಿ ಇದೆ ಎಂದರೆ ಸರಿ. ಅಣ್ಣಯ್ಯ ರೆಡ್ಡಿಯವರಾಗಲೀ, ಕಾಂತರಾಜು ರವರಾಗಲೀ 14 ಚಕ್ರದ ಗಾಡಿಯ ನಂಬರನ್ನು ತಿಳಿಸಿಲ್ಲ. 6 ತಿಂಗಳು ವಾಹನವನ್ನು ನಿಲ್ಲಿಸಿದರೆ ವಾಹನ ಚಲಿಸುವ ಕಂಡಿಷನ್ ನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾಹನವನ್ನು ಟರ್ಮಿನಲ್ ತೆಗೆದು ನಿಲ್ಲಿಸಿದ್ದೆನು. ಬೇರೆ ಕಡೆ ಹಿಟಾಚಿಯನ್ನು ಸಾಗಾಟ ಮಾಡಬೇಕಾದರೆ 2 ಲಕ್ಷ ಕೇಳುತ್ತಾರೆಂದು, ಕೆಲಸ ಬಂದರೆ ಶಿಫ್ಟ್ ಮಾಡಬಹುದೆಂದು ಟರ್ಮಿನಲ್ ತೆಗೆದು ನಿಲ್ಲಿಸಿದ್ದೆ. ಹಾಸನದಿಂದ ಹಿಟಾಚಿಯನ್ನು ಸಾಗಾಟ ಮಾಡಿದ ಬಗ್ಗೆ ದಾಖಲಾತಿ ಇಲ್ಲ. ಕಲ್ಲು ಗಣಿಗಾರಿಕೆ ಮಾಡಲು ನನ್ನ ಹೆಸರಿನಲ್ಲಿ ಲೈಸೆನ್ಸ್ ಇಲ್ಲ.

(ಮುಂದುವರೆದ ಪಾಟೀಸವಾಲನ್ನು ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆ:ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**